## ಅಧ್ಯಾಯ 16

ಏನಿದರರ್ಥ? ತಾನು ಪ್ರಭಾಕರನ ಮಗನಲ್ಲವೇ? ತನ್ನ ತಾಯಿ ಬೇರೊಬ್ಬರ ಕೈ ಹಿಡಿದು ತಾನು ಹುಟ್ಟಿದವನೇ? ಅಥವಾ ತಾನು ಸಾಕು ಮಗನೇ? ಈ ಭಾವಚಿತ್ರ ಬೇರೆಯೇ ಕಥೆ ಹೇಳುತ್ತಿದೆಯಲ್ಲ...! ಸೂರ್ಯನ ಮನದಲ್ಲಿ ಅನುಮಾನದ ಹುಳ ಹೊಕ್ಕಿ ಕೊರೆಯ ತೊಡಗಿದಂತೆ, ಅದಕ್ಕೆ ಪೂರಕವಾದ ಬೇರೆ ಭಾವಚಿತ್ರಗಳು ಅಥವಾ ಸಾಕ್ಷಿ ದೊರಕಬಹುದೇ ಎಂದು ಆ ಪುಸ್ತಕಗಳನ್ನೆಲ್ಲ ಜಾಲಾಡಿದ. ಆಗಲೇ ಅವನಿಗೆ ಬೇಕಾದ ವಸ್ತು ಕಣ್ಣಿಗೆ ಬಿತ್ತು. ಅದೊಂದು ಮದುವೆಯ ಹಳೇ ಆಲ್ಬಮ್ ಆಗಿತ್ತು. ಕಪ್ಪು ದಪ್ಪ ಹಾಳೆಗಳ ಮೇಲೆ ಅಂಟಿಸಲಾದ ಕಪ್ಪು ಬಿಳುಪಿನ ಭಾವಚಿತ್ರಗಳು. ಅದು ವಿಜಯಮ್ಮನ ಮದುವೆಯ ಚಿತ್ರಗಳು. ತನ್ನ ತಾಯಿ ಕೈ ಹಿಡಿದ ವ್ಯಕ್ತಿ ಬೇರೆಯೇ! ಅಂದರೆ ತನ್ನ ತಂದೆ ಈ ಭಾವಚಿತ್ರದಲ್ಲಿರುವ ವ್ಯಕ್ತಿಯೇ ಹೊರತು ಪ್ರಭಾಕರರಾಯರಲ್ಲ! ಹಾಗಾದರೆ ತನ್ನ ತಂದೆ ಎಲ್ಲಿ? ತನಗೆ ಬುದ್ಧಿ ಬಲಿತ ಮೇಲಿಂದ, ತಮ್ಮೊಂದಿಗೆ ಇದ್ದಿದ್ದು ಪ್ರಭಾಕರ ರಾಯರೇ ಹೊರತು ಈ ಭಾವಚಿತ್ರದಲ್ಲಿದ್ದ ವ್ಯಕ್ತಿ ಅಲ್ಲ!

ಆ ಆಲ್ಬಮ್‌ನ ಕೊನೆಯಲ್ಲಿ ಮದುವೆಯ ಆಮಂತ್ರಣ ಪತ್ರಿಕೆಯೂ ಇದ್ದು ವಧುವಿನ ಹೆಸರಿನ ಜಾಗದಲ್ಲಿ 'ವಿಜಯ' ಎಂಬ ಹೆಸರಿದ್ದು ವರನ ಹೆಸರಿನ ಜಾಗದಲ್ಲಿ ನಿರಂಜನ ಎಂದು ಬರೆಯಲಾಗಿತ್ತು. ಅಂದರೆ ಈ ಪುಸ್ತಕಗಳನ್ನು ಓದುವ ಹವ್ಯಾಸ ತನ್ನ ತಂದೆಗಿತ್ತು. ಹಾಗಾದರೆ ನಿರಂಜನರು ಎಲ್ಲಿ ಹೋದರು? ಅವರ ಸ್ಥಾನವನ್ನು ಪ್ರಭಾಕರರು ಏಕೆ ಪಡೆದುಕೊಂಡಿದ್ದಾರೆ?

ಅವನ ಮನಸ್ಸು ಕಲಸುಮೇಲೋಗರವಾಗಿತ್ತು. ಅಲ್ಲಿ ಕುಳಿತಿರಲಾಗದೇ ಆ ಆಲ್ಬಂ ಮತ್ತು ಮೊದಲು ದೊರೆತ ಭಾವಚಿತ್ರವನ್ನು ಹೊತ್ತುಕೊಂಡು ತನ್ನ ಕೋಣೆ ಸೇರಿಕೊಂಡಿದ್ದ. ಅನಂತರ, ಕೆಲಸದ ಮೇಲಿನ ಸೂರ್ಯನ ಆಸಕ್ತಿ ಕ್ಷೀಣಿಸಿತ್ತು. ಅವನ ತಲೆಯಲ್ಲಿ ಓಡುತ್ತಿದ್ದುದು ಒಂದೇ ಪ್ರಶ್ನೆ. ಪ್ರಭಾಕರ ರಾಯರು ತನ್ನ ತಾಯಿಯೊಂದಿಗೆ ಏಕೆ ಸಹಜೀವನ ನಡೆಸುತ್ತಿದ್ದಾರೆ? ತನ್ನ ನಿಜವಾದ ತಂದೆ ಎಲ್ಲಿ?

### ನೆನಪಿನ ಸುರುಳಿಯಲ್ಲಿ..

ಈಗ ಅವನಿಗೆ ನಿಧಾನವಾಗಿ ತನ್ನ ಬಾಲ್ಯದ ನೆನಪಿನ ಸುರುಳಿ ಬಿಚ್ಚತೊಡಗಿತು. ನೆನಪುಗಳು ಹಿಂದೆ ಸರಿದಂತೆಲ್ಲ ಮನದ ಕಹಿ ಮತ್ತೆ ಆವರಿಸತೊಡಗಿತ್ತು.

ಸೂರ್ಯನಿಗೆ ಮುಂಚಿನಿಂದಲೂ ಓದೆಂದರೆ ಅಲರ್ಜಿ. ವಿಜಯಮ್ಮ ಅನುನಯಿಸಿ, ಬಳಿಯಲ್ಲಿ ಕುಳ್ಳಿರಿಸಿ, ರಮಿಸಿ ಎಷ್ಟು ಕಾಡಿ ಬೇಡಿದರೂ ಸೂರ್ಯನಿಗೆ ಪುಸ್ತಕವೆಂದರೆ ಮಾರು ದೂರ ಓಡುತ್ತಿದ್ದ.

ಪ್ರಭಾಕರರಾಯರು ಬಲು ಬೇಗ ತಾಳ್ಮೆಗೆಡುತ್ತಿದ್ದರು. ಕಡೆಗೆ ಅವರು ಬೊಬ್ಬೆ ಹೊಡೆದು ನಾಲ್ಕು ಬೆನ್ನಿಗೆ ತದಕಿದ ಬಳಿಕ ಅವರ ಮೇಲಿನ ಭಯಕ್ಕೆ ಸೂರ್ಯ ಕಾಟಾಚಾರಕ್ಕೆ ಪುಸ್ತಕ ಹಿಡಿಯುತ್ತಿದ್ದ. ಹಾಗಾಗಿ ಕಲಿತದ್ದು ಯಾವುದೂ ಅವನ ತಲೆಯಲ್ಲಿ ಉಳಿಯುತ್ತಲೇ ಇರಲಿಲ್ಲ. ಪ್ರಾಥಮಿಕ ಶಿಕ್ಷಣ ಮುಗಿಯುವ ಹೊತ್ತಿಗೆ ಸೂರ್ಯ ಶಾಲೆಯಲ್ಲಿ ಕಲಿಯಲು ನಾಲಾಯಕ್ಕು ಎಂದೆನ್ನಿಸಿಕೊಂಡಿದ್ದ. ಶಾಲೆಯ ಮುಖ್ಯೋಪಾಧ್ಯಾಯರು ರಾಯರನ್ನು ಕರೆಸಿ, ಸೂರ್ಯನ ಅತೀ ಸಾಧಾರಣ ಫಲಿತಾಂಶದ ವರದಿ ನೀಡಿದ ಬಳಿಕ ಕೆಂಡಾಮಂಡಲವಾಗಿ, ಮನೆಗೆ ಬಂದ ಬಳಿಕ ಮುಖ ಮೂತಿ ನೋಡದೇ ಬಾಸುಂಡೆ ಬರುವಂತೆ ಬಾರಿಸಿದ್ದರು. ಸೂರ್ಯನಿಗೆ ತಂದೆಯ ಮುಖ ಕಂಡರೆ ರೇಜಿಗೆ ಬರುವಂಥ ವಾತಾವರಣ ಸೃಷ್ಟಿಯಾಗಿತ್ತು.

'ಈ ಅಪ್ಪ ಬರೀ ಕೆಟ್ಟವರು! ಯಾವಾಗ ನೋಡಿದ್ರೂ ನನಗೆ ಬೈತಾರೆ... ಹೊಡೀತಾರೆ.. ನನಗೆ ಈ ಅಪ್ಪಾ ಬೇಡಾ' ಸೂರ್ಯ ತಾಯಿಯ ಮುಂದೆ ಅಳಲು ತೋಡಿಕೊಳ್ಳುತ್ತಿದ್ದ.

'ಹಾಗೆಲ್ಲ ಅನ್ಬೇಡ್ವೋ... ನೀನು ಓದಬೇಕು... ವಿದ್ಯಾವಂತನಾಗಿ ನಿನ್ನ ಅನ್ನ ನೀನು ಸಂಪಾದಿಸಬೇಕು... ನೀನು ಯಾಕೆ ಮತ್ತೆ ಕಲಿಯಲ್ಲ...? ನಿನ್ನ ಹಠ, ಬೇಜವಾಬ್ದಾರಿತನ ಎಲ್ಲಾ ಬಿಟ್ಟು ಗಂಭೀರವಾಗಿ ಓದ್ಕೋಬಾರದೇನು?' ವಿಜಯಮ್ಮ ಮಗನನ್ನು ರಮಿಸುವ ವ್ಯರ್ಥ ಪ್ರಯತ್ನ ಮಾಡುತ್ತಿದ್ದರು. ಸಂಜೆಯಾದೊಡನೆ ಸೂರ್ಯ ತನ್ನ ಗೆಳೆಯರ ಸಂಗಡ, ಮೈದಾನದಲ್ಲಿ ಕ್ರಿಕೆಟ್ ಆಡಲು ಓಡುತ್ತಿದ್ದ. ಕ್ರಿಕೆಟ್ ಎಂದರೆ ಸೂರ್ಯನಿಗೆ ಎಲ್ಲಿಲ್ಲದ ಹುಚ್ಚು. ಸಚಿನ್ ಸೂರ್ಯನ ಪಾಲಿಗೆ ಆರಾಧ್ಯ ದೈವವಾಗಿದ್ದ. ಗೆಳೆಯರ ಸಂಗ, ಕ್ರಿಕೆಟ್ ಹುಚ್ಚು ಅವನನ್ನು ಸದಾ ಮನೆಯಿಂದ ಹೊರಗೇ ಉಳಿಯುವಂತೆ ಮಾಡಿತ್ತು.

'ಇವ್ನು ಇದೇ ರೀತಿ ಇದ್ರೆ ... ಉದ್ಧಾರವಾಗೋದಿಲ್ಲ.' ಪ್ರಭಾಕರರಾಯರಿಗೆ ಮಗನ ನಡವಳಿಕೆ ಚಿಂತಿತರನ್ನಾಗಿಸಿತ್ತು. ಮನೆಯಿಂದ ಸದಾ ಹೊರಗುಳಿಯಲು ಬಯಸುತ್ತಿದ್ದ ಸೂರ್ಯನಿಗೆ ತಿನ್ನಲು ತಿರುಗಾಡಲು ಹಣದ ಅಗತ್ಯ ಬೀಳುತ್ತಿತ್ತು. ಆಗೆಲ್ಲಾ ವಿಜಯಮ್ಮನ ಮುಂದೆ ದುಂಬಾಲು ಬೀಳುತ್ತಿದ್ದ. ಅವರು ನಿರಾಕರಿಸಿದಾಗ ಅತ್ತು, ಕರೆದು, ಕಾಡಿ ಬೇಡಿ ವಸೂಲು ಮಾಡುತ್ತಿದ್ದ. ಇದನ್ನರಿತು ರಾಯರು ಪತ್ನಿಗೆ ಹಣ ಕೊಡುವುದನ್ನು ನಿಲ್ಲಿಸಿಬಿಟ್ಟರು.

'ಅವ್ನಿಗೆ ಹಣದ ನೋವು ಏನೆಂದು ಅರಿವಾಗಬೇಕಾದರೆ, ಅದರ ಮಹತ್ವ ಅರಿವಾಗಬೇಕಾದರೆ ಅದು ಅಯಾಚಿತ ಸಿಗಬಾರದು... ಸಂಪಾದನೆ ಎಷ್ಟು ಅಗತ್ಯ... ಅದಕ್ಕಾಗಿ ಎಷ್ಟು ಶ್ರಮ ಪಡಬೇಕೆಂದು ಸೂರ್ಯನಿಗೆ ಅರ್ಥವಾಗಬೇಕು.'

ಸೂರ್ಯ ಮನೆಗೆ ಹಿಂದಿರುಗಿದ ಎಂದರೆ ಅವನನ್ನು ಕುಳ್ಳಿರಿಸಿ ರಾಯರು ಬೋಧನೆ ಶುರು ಮಾಡುತ್ತಿದ್ದರು. ಅದನ್ನು ಆಲಿಸುವ ವ್ಯವಧಾನ ಸೂರ್ಯನಲ್ಲಿ ಉಳಿಯುತ್ತಲೇ ಇರಲಿಲ್ಲ.

'ಅಪ್ಪ... ನನಗೆ ನಿನ್ನ ಕಿರಿಕಿರಿ ಸಹಿಸಲು ಆಗಲ್ಲ... ನೀನು ಹೀಗೆ ಮಾಡಿದ್ರೆ ನಾನು ಇಲ್ಲಿ ಇರಲ್ಲ... ಮಾತೆತ್ತಿದ್ರೆ ನೀನು ಬೈತೀಯಾ, ಹೊಡೀತೀಯಾ... ಬುದ್ಧಿವಾದ ಹೇಳಲು ಬರ್ತೀಯಾ' ಎಂದು ಅಸಮಾಧಾನ ವ್ಯಕ್ತಪಡಿಸುತ್ತಿದ್ದ.

ತಾಯಿಯಿಂದ ಹಣ ದೊರಕುವುದು ನಿಂತಾಗ, ಸೂರ್ಯನಿಗೆ ಅದಕ್ಕಾಗಿ ತಂದೆಯ ಮೊರೆ ಹೋಗುವುದೇ ಅನಿವಾರ್ಯವಾಯಿತು. ಆದರೆ ಅದು ದೊರಕದೆಂಬ ಖಾತ್ರಿ ಇದ್ದರಿಂದ ಅವರ ಕೋಣೆಗೆ ನುಸುಳಿ ಅವರಿಗೆ ಅರಿವಾಗದಂತೆ ಹಣ ತೆಗೆಯಲು ಶುರು ಮಾಡಿದ. ಒಂದು ದಿನ ಇದರ ಅರಿವಾಗಿ ರಾಯರು ಅವನನ್ನು ಚೆನ್ನಾಗಿ ಥಳಿಸಿದರು.

'ಇವ್ನು ಇನ್ನು ನಮ್ಮ ಕೈಗೆ ಹತ್ತುವುದಿಲ್ಲ. ಮಗನೆಂಬ ಮಮಕಾರಕ್ಕೆ ಬಿದ್ದು ಇಷ್ಟು ದಿನ ಸಹಿಸಿಕೊಂಡೆ. ಇನ್ನಾಗದು... ಇವ್ನು ಇಲ್ಲೇ ಇದ್ದರೆ ಸ್ನೇಹಿತರ ಸಂಗಡ ಬಿದ್ದು ಹಾಳಾಗ್ತಾನೆ. ಇವ್ನನ್ನು ಎಲ್ಲದರಿಂದ ದೂರ ಮಾಡ್ಬೇಕು. ನಾನೊಂದು ನಿರ್ಧಾರಕ್ಕೆ ಬಂದಿದ್ದೇನೆ... ವಿಜಯಾ... ನೀನು ಇದಕ್ಕೆ ಒಪ್ಪಲೇಬೇಕು' ಪ್ರಭಾಕರರಾಯರ ಅಚಲವಾದ ಸ್ವರದಲ್ಲಿ ನುಡಿದರು.

'ಏನದು..? ಅವ್ನು ಬುದ್ಧಿ ಸರಿ ಹೋದ್ರೆ ಸಾಕು ರೀ... ನನಗೂ ಅವನ ಭವಿಷ್ಯದ ಚಿಂತೆಯಾಗಿದೆ, ಇವ್ನು ದಿನೇ ದಿನೇ ಹಾಳಾಗ್ತಿರೋದನ್ನು ನಾನು ನೋಡಲಾರೆ.' ಮಗನ ಚಿಂತೆ ಅವರನ್ನೂ ಹಣ್ಣಾಗಿಸಿತ್ತು.

'ನಾವು ಸೂರ್ಯನನ್ನು ರೆಸಿಡೆನ್ಶಿಯಲ್ ಸ್ಕೂಲ್‌ಗೆ ಸೇರಿಸೋಣ.. ಉಡುಪಿಯಲ್ಲಿ ಒಂದು ಒಳ್ಳೇ ಸ್ಕೂಲ್ ಇದೆ... ಅವ್ರದ್ದೇ ಹಾಸ್ಟೆಲ್ ಇದೆ... ಒಳ್ಳೇ ಶಿಸ್ತಿನಿಂದ ಬೆಳೆಸ್ತಾರೆ... ಬೆಳಿಗ್ಗೆ ಐದು ಗಂಟೆಗೆ ಏಳ್ಬೇಕು... ಪಾಠದಷ್ಟೇ ಆಟಗಳಿಗೂ ಮಹತ್ವ ಕೊಡುತ್ತಾರೆ... ಹಣ ಜಾಸ್ತಿಯಾದ್ರೂ ಪರ್ವಾಗಿಲ್ಲ... ಸೂರ್ಯ ಶಿಸ್ತು ಕಲೀತಾನೆ... ನಮ್ಮ ಮುದ್ದು ಅವನನ್ನು ಮೊಂಡಾಗಿಸಿದೆ.'

ವಿಜಯಮ್ಮನಿಗೆ ಇದ್ದ ಒಬ್ಬನೇ ಮಗನನ್ನು ಅಷ್ಟು ದೂರ ಕಳಿಸಲು ಮನಸ್ಸು ಬರಲಿಲ್ಲ. ಅವರ ಮೌನ ಅವರ ಮನದ ಭಾವವನ್ನು ಅರುಹಿತ್ತು. 'ನಿನ್ನ ಸಂಕಟ ನನಗೆ ಅರ್ಥವಾಗುತ್ತೆ ವಿಜಯಾ... ನನಗೆ ಅವ್ನ ಮೇಲೆ ಮಮತೆ ಇಲ್ಲವೇನು..? ಆದ್ರೆ ನಾವು ಹೃದಯದ ಮೇಲೆ ಬಂಡೆ ಕಲ್ಲು ಹೇರಲೇ ಬೇಕು...ನಮ್ಮ ಕುರುಡು ಮೋಹ ಅವ್ನ ಭವಿಷ್ಯಕ್ಕೆ ಅಡ್ಡಿಯಾಗಬಾರದು.. ನಮ್ಮಲ್ಲೇ ಅವ್ನನ್ನ ಇಟ್ಕೊಂಡ್ರೆ ಇನ್ನು ಅವ್ನು ನಮ್ಮ ಅಂಕೆಗೆ ಸಿಗಲ್ಲ... ಈಗ್ಲೇ ಸಹವಾಸ ದೋಷದಿಂದ ಹಾಳಾಗಿದ್ದಾನೆ.. ಮೂರು ಹೊತ್ತೂ ಹಾದಿ ಬೀದಿ ಸುತ್ತಿ, ಕ್ರಿಕೆಟ್ಟು, ಹೋಟೆಲ್ಲು ಅಂತ ಹೊರಗೆ ಸುತ್ತಾಡ್ತಾನೆ... ಕಲಿಕೆ ಪೂರ್ತಿ ಹಿಂದೆ ಬಿದ್ದಿದ್ದೆ.. ಹೀಗಾದ್ರೆ ಅವ್ನ ಮುಂದಿನ ಜೀವನ ಹೇಗೆ..? ಅಲ್ಲಿ ಶಾಲೇಲಿ ಪ್ರತಿಯೊಂದಕ್ಕೂ ಅಂಕುಶ ಹಾಕ್ತಾರೆ.. ಕಡ್ಡಾಯವಾಗಿ ಕಲೀಬೇಕು... ಕಡ್ಡಾಯವಾಗಿ ಆಡಬೇಕು... ಒಳ್ಳೇ ನಿಯಮಿತವಾದ ಶಿಸ್ತು ಬದ್ಧ ಜೀವನ ಕಲಿಸ್ತಾರೆ... ನಮ್ಮ ಸೂರ್ಯ ಆಗ ಮೆದುವಾಗ್ತಾನೆ... ನಮ್ಮ ಮೌಲ್ಯನೂ ಏನು ಅಂತ ಅವ್ನಿಗೆ ಅರ್ಥವಾಗಬೇಕಾದರೆ ಅವ್ನು ನಮ್ಮಿಂದ ದೂರ ಹೋಗಲೇಬೇಕು' ರಾಯರ ಮಾತುಗಳು ಕ್ರಮೇಣ ವಿಜಯಮ್ಮನ ಮೇಲೆ ಪರಿಣಾಮ ಬೀರಿ ಅವರೂ ಸಮ್ಮತಿ ಸೂಚಿಸಿದರು.

**(ಸಶೇಷ)**